| Form No.4 (Civil) Deposition Sheets (R.P.No.57) |
|---|

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 38/2018

ಪ್ರಾ.ಸಾ 9 ಚಾ.ಸಾ 18

| | | |
|---|---|---|
| ಹೆಸರು | : | ತಿಪ್ಪಣ್ಣ |
| ತಂದೆಯ ಹೆಸರು | : | ಭೀಮಪ್ಪ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಜೇಸ್ಕಾಂನಲ್ಲಿ ಆಪರೇಟರ್ |
| ವಾಸ | : | ಯಾದಗಿರಿ |

ಪ್ರಮಾಣ ವಚನ ಭೋಧಿಸಿದ ದಿನಾಂಕ: 17-01-2026
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ನಾನು 2016 ರಿಂದ 2018 ರವರೆಗೆ ಬಳಿಚಕ್ರದಲ್ಲಿ ಪ್ರಭಾರಿ ಶಾಖಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿ: 16.03.2018 ರಂದು ಸಿ.ಪಿ.ಐ ರವರಿಂದ ಬಳಿಚಕ್ರದಲ್ಲಿ ವಿದ್ಯುತ್ ಸರಬರರಾಜು ಇದ್ದ ಬಗ್ಗೆ 12.02.2018 ರಂದು ರಾತ್ರಿ 8.00-11.00 ಗಂಟೆಯವರೆಗೆ ವಿದ್ಯುತ ಸರಬರಾಜು ಇದ್ದ ಬಗ್ಗೆ ಮಾಹಿತಿ ನೀಡುವಂತೆ ಕೋರಿಕೊಂಡಿದ್ದು ಇರುತ್ತದೆ. ವಿದ್ಯುತ ಸಂಪರ್ಕ ಇತ್ತು ಎಂದು ದಾಖಲೆಗಳನ್ನು ಪರಿಶೀಲಿಸಿ ವರದಿಯನ್ನು ಕೊಟ್ಟಿರುತ್ತೇನೆ. ಸದರಿ ವರದಿಯನ್ನು ಈಗ ನೋಡುತ್ತಿದ್ದು ಅದನ್ನು **ನಿ.ಪಿ.14** ಎಂದು ಸಾಕ್ಷಿದಾರರ ಸಹಿಯನ್ನು **ನಿ.ಪಿ.14(ಎ)** ಎಂದು ಗುರುತಿಸಲಾಯಿತು.

ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ.ಹೆಚ್.ಜಿ. ವಕೀಲರಿಂದ

3. 2017-2018 ರಲ್ಲಿ ನಿರಂತರ ಜ್ಯೋತಿ ಇತ್ತು ಎಂದರೆ ಸರಿ. ದಿ: 12.02.2018 ರಂದು ಆ ದಿನ ಬಳಿಚಕ್ರದಲ್ಲಿ ವಿದ್ಯುತ ಸಂಪರ್ಕ ಇರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಸುಳ್ಳು ವರದಿ ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಯಾದಗಿರಿ.

Form No.4 (Civil)
Deposition
Sheets
(R.P.No.57)

# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆಃ 38/2018

ಪ್ರಾ.ಸಾ 10 ಚಾ.ಸಾ 19

| | | |
|---|---|---|
| ಹೆಸರು | : | ಉಮೇಶ |
| ತಂದೆಯ ಹೆಸರು | : | ಬಸಪ್ಪ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಎಇಇ ಸೇಡಂ |
| ವಾಸ | : | ಕಲಬುರಗಿ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 17-01-2026
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ನಾನು ಯಾದಗಿರಿಯಲ್ಲಿ ಅಸಿಸ್ಟಂಟ ಇಂಜಿನಿಯರ ಆಗಿ 2016 ರಿಂದ 2018, ಸೇಪ್ಟಂಬರ ರವರೆಗೆ ಕರ್ತವ್ಯ ನಿರ್ವಹಿಸಿದ್ದೇನೆ.

2. ಗುರುಮಠಕಲ್ ಸಿ.ಪಿ.ಐ ರವರ ಕೋರಿಕೆಯ ಮೇರೆಗೆ ದಿಃ 07.04.2018 ರಂದು ಮಧ್ಯಾಹ್ನ 1.30 ರ ಸುಮಾರು ಪಿ.ಸಿ ನಂಬರ 179 ರೇಣುಕಾ ರಾಜ ಇವರೊಂದಿಗೆ ಹಳೇ ಬ್ಯಾಂಕಿನ ಸಿ.ಸಿ ರಸ್ತೆಯ ಮೇಲೆ ಘಟನಾ ಸ್ಥಳವಿದ್ದು ಅಲ್ಲಿಗೆ ನನ್ನನ್ನು ಕರೆದುಕೊಂಡು ಹೋಗಿದ್ದು ಸದರಿ ಪೊಲೀಸರು ತೋರಿಸಿದ ಮೇರೆಗೆ ನಾನು ಸ್ಥಳದಲ್ಲಿ ನಾನು ಕರಡು ನಕಾಶೆ ತಯಾರಿಸಿರುತ್ತೇನೆ. ಸದರಿ ಕರಡು ನಕಾಶೆಯನ್ನು **ನಿ.ಪಿ.15** ಎಂದು ಸಾಕ್ಷಿದಾರರ ಸಹಿಯನ್ನು **ನಿ.ಪಿ.15(ಎ)** ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ.ಹೆಚ್.ಜಿ. ವಕೀಲರಿಂದ</u>

3. ಲೋಕೊಪಯೋಗ ಇಲಾಖೆ ಎಇಇ ಕಛೇರಿಯಿಂದ ಕೃತ್ಯ ನಡೆದ ಸ್ಥಳಕ್ಕೆ ಹೋಗುವಂತೆ ಪತ್ರ ಬಂದಿತ್ತು. ನಮ್ಮ ಕಛೇರಿಯ ಮೂಮೆಂಟ ರೆಜಿಸ್ಟ್ರರನಲ್ಲಿ ಗುನ್ನೆ ಸ್ಥಳಕ್ಕೆ ಹೋಗಿರುವುದನ್ನು ನಮೊದಿಸಿರುವುದಿಲ್ಲ. ಕೃತ್ಯ ನಡೆದ ಸ್ಥಳಕ್ಕೆ ಸದರಿ ಪೊಲೀಸರೇ ಕರೆದುಕೊಂಡು ಹೋಗಿರುತ್ತಾರೆ. ನಾನು ಪೊಲೀಸರ ಮಾತು ಕೇಳಿ ನಿ.ಪಿ.15 ರಂತೆ ಸುಳ್ಳು ವರದಿಯನ್ನು ಸೃಷ್ಟಿಸಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ ಮತ್ತು ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಯಾದಗಿರಿ.